ಮಾಡುತ್ತೇನೆಂದು ನಮ್ಮ ಹಿರಿಯ ಸದಸ್ಯರೆಲ್ಲರಿಗೆ ಭರವಸೆಕೊಡಬಯಸುತ್ತೇನೆ. ದಯಮಾಡಿ ಈ ತಿದ್ದುಪಡಿ ಮಸೂದೆಗೆ ಮನ್ನಣೆ ನೀಡಿ ಅಂಗೀಕೃತಗೊಳಿಸಬೇಕೆಂದು ತಮ್ಮ ಮುಖೇನ ಮಾನ್ಯ ಸದಸ್ಯರು ಎಲ್ಲರಲ್ಲೂ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ "2002ರ ಕರ್ನಾಟಕ ಭಿಕ್ಷಾಟಣೆ ನಿಷೇಧ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5ರವರೆಗೆ

ಉಪಾಧ್ಯಕ್ಷರು:- "ಖಂಡ 2 ರಿಂದ 5 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು

(2ರಿಂದ 5ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ.ಕೃಷ್ಣಪ್ಪ(ಸಮಾಜ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, "2002ರ ಕರ್ನಾಟಕ ಭಿಕ್ಷಾಟಣೆ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ,

"2002ರ ಕರ್ನಾಟಕ ಭಿಕ್ಷಾಟಣೆ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

7) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ:- ಕರ್ನಾಟಕ ಗೃಹ ರಕ್ಷಕದಳ (ತಿದ್ದುಪಡಿ) ವಿಧೇಯಕ 2003ನ್ನು ಮುಂದುವರಿದ ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ:

ಉಪಾಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಬಿಜಾಪುರ ಡಿಸಿಸಿ ಬ್ಯಾಂಕಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಿರುವ ಬಗ್ಗೆ....

ಶ್ರೀ ಎ.ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ, ಮತ್ತೊಂದು ಬಿಲ್ ಇದೆ ಅದೇ ಕರ್ನಾಟಕ ಗೃಹ ರಕ್ಷಕ ದಳ ವಿಧೇಯಕವನ್ನು ಪಾಸ್ ಮಾಡಬೇಕಾಗಿತ್ತು.

ಉಪಾಧ್ಯಕ್ಷರು:- ಒಂದು ನಿಮಿಷ ಕುಳಿತುಕೊಳ್ಳಿ ಶಿವಾನಂದ ಪಾಟೀಲ್‌ರೆ, ಈಗ ಕರ್ನಾಟಕ ಗೃಹ ರಕ್ಷಕ ದಳ ತಿದ್ದುಪಡಿ ವಿಧೇಯಕ....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ದಯಮಾಡಿ ನಾವು ಇದನ್ನು ಕೊಟ್ಟು 15 ದಿವಸ ಆಯಿತು ಇದಕ್ಕೆ ಅವಕಾಶ ಕೊಡಿ. ಈಗಾಗಲೇ ಎರಡು ಬಿಲ್‌ಗಳು ಆಗಿವೆ ಮೊದಲು ಇದನ್ನು ತೆಗೆದುಕೊಳ್ಳಿ ನಂತರ ಅದರ ಬಗ್ಗೆ ವಿಚಾರ ಮಾಡೋಣ. ಪ್ರಮುಖವಾಗಿ ಎರಡು ಬಿಲ್‌ಗಳು ಮುಗಿದಿವೆ, ಬಿಎಸಿ ಯಲ್ಲಿ ಚರ್ಚಿಸಿದಂತೆ ಮಾಡಿಕೊಟ್ಟಿದ್ದೇವೆ.

ಉಪಾಧ್ಯಕ್ಷರು:- ಇದು ಈಗಾಗಲೇ ಚರ್ಚೆಯಾಗಿದೆ, ಕೆಲವು ಸೇರ್ಪಡೆ ಮಾಡಬೇಕು ಎನ್ನುವ ವಿಷಯ ಮಾತ್ರ ಇದೆ...

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಪುನಃ ಅವರು ಏನೇನು ಚರ್ಚೆ ಮಾಡಿದ್ದಾರೆ ಅದೆಲ್ಲಾ ಹೊಸದಾಗಿ ಪ್ರಾರಂಭವಾಗುತ್ತದೆ. ಅದಕ್ಕೆ ಮೊದಲು ಇದನ್ನು ತೆಗೆದುಕೊಳ್ಳಿ. ಪುನಃ ಮತ್ತೆ ಸಮಯ ಹೋಗುತ್ತದೆ.

ಉಪಾಧ್ಯಕ್ಷರು:- ಇವತ್ತು ಖಂಡಿತಥವಾಗಿ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ನಾನು ಮಾಡಿಕೊಡುತ್ತೇನೆ. ಇದರಲ್ಲಿ ಕೇವಲ ತಿದ್ದುಪಡಿ ಮಾಡಿರುವುದು ಮಾತ್ರ ಇರುವುದು, ಆಯಿತು ಹೇಳಿ. ಈಗಾಗಲೇ ಸಾಕಷ್ಟು ಚರ್ಚೆಯಾಗಿ ಇದರ ಬಗ್ಗೆ ತಿದ್ದುಪಡಿ ತೆಗೆದುಕೊಂಡು ಬನ್ನಿ ಎಂದಾಗ ಸರ್ಕಾರದ ವತಿಯಿಂದಲೇ ತಿದ್ದುಪಡಿ ಮಾಡಿ ನಿಮಗೆ ಕೊಡುತ್ತಿದ್ದೇವೆಯೆಂದು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ತೆಗೆದುಕೊಳ್ಳಿ ಸಾರ್ ಯಾರು ಬೇಡ ಎಂದವರು? ಇದಾದ ಮೇಲೆ ಅದನ್ನು ತೆಗೆದುಕೊಳ್ಳಿ. ನಾವೇನು ಅದನ್ನು ವಿರೋಧಿಸುತ್ತಿಲ್ಲ.

ಉಪಾಧ್ಯಕ್ಷರು:- ಅದಕ್ಕೆ ಟೈಂ ತೆಗೆದುಕೊಳ್ಳುತ್ತದೆ ಇದಕ್ಕೆ ಟೈಂ ತೆಗೆದುಕೊಳ್ಳುವುದಿಲ್ಲ. ಬೇಗ ಮುಗಿಸಿ ಕೊಡಿ, ತಾವು ಹೇಳಿ.

ಶ್ರೀ ಶಿವಾನಂದ ಎಸ್ ಪಾಟೀಲ್:- ಬೆಳಿಗ್ಗೆ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳದೆ ಸಂಜೆ 6 ಗಂಟೆಗೆ ಮಂತ್ರಿಗಳು ಬಂದಾಗ ತೆಗೆದುಕೊಳ್ಳುತ್ತೀರಿ, ದಯಮಾಡಿ ಅವಕಾಶ ಮಾಡಿಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಜೆಂಡಾದಲ್ಲಿರುವಂತೆ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಅಜೆಂಡಾ ನಮಗೆ ಏಕೆ ಕಳುಹಿಸುವುದು?

ಉಪಾಧ್ಯಕ್ಷರು:- ಖಂಡಿತವಾಗಿ ತೆಗೆದುಕೊಳ್ಳುತ್ತೇನೆ, ಇದೂ ಕೂಡ ಅಜೆಂಡಾದಲ್ಲಿ ಇದೆ ಅಲ್ಲವೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಜೆಂಡಾದಲ್ಲಿ ಎರಡನೇಯದಾಗಿದೆ ಅದನ್ನು ಯಾವಾಗ ತೆಗೆದುಕೊಳ್ಳುವುದು? ಎರಡು ಬಿಲ್‌ಗಳು ಮುಗಿದಿವೆ ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ? ಎರಡು ಬಿಲ್‌ಗಳು ಆಗುವುದಕ್ಕಿಂತ ಮುಂಚೆ ನಾವು ಕೇಳಲಿಲ್ಲ, ಅದು ಮುಗಿದ ಮೇಲೆ ನಾವು ಕೇಳುತ್ತಿರುವುದು ದಯಮಾಡಿ ಅವಕಾಶ ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್:- ಯಾಕೆ ಈ ರೀತಿ ಮಾಡುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಚರ್ಚೆಯಾದ ಮೇಲೆ ಅದನ್ನು ಪಾಸ್ ಮಾಡಬಹುದಲ್ಲವೆ? ಯಾಕೆ ಇಷ್ಟು ಹರಿಬಿರಿ ಮಾಡುತ್ತೀರಿ?

ಉಪಾಧ್ಯಕ್ಷರು:- ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಇದು ಈಗಾಗಲೇ ಚರ್ಚಿಸಿ ಮುಗಿದ ವಿಷಯ, ಕೆಲವೊಂದು ತಿದ್ದುಪಡಿ ಮಾಡಬೇಕು ಎನ್ನುವ ಸೂಚನೆಯ ಮೇರೆಗೆ ಅವರು ತಿದ್ದುಪಡಿ ಮಾಡಿದ್ದಾರೆ. 5 ನಿಮಿಷದಲ್ಲಿ ಇದು ಮುಗಿಯುತ್ತದೆ. ಇದರಲ್ಲಿ ಚರ್ಚೆ ಮಾಡುವಂಥದ್ದು ಏನೂ ಇಲ್ಲ. ಏಕೆಂದರೆ ಎಲ್ಲಾವೂ ಚರ್ಚೆಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇದು ಬೇಗ ಮುಗಿಯುವುದಿಲ್ಲ, ಅವರೇನು ತಿದ್ದುಪಡಿ ತಂದಿದ್ದಾರೆ ಅದು ಸರಿ ಇದೆಯೇ ಇಲ್ಲವೇ ಎಂದು ಅದರ ಬಗ್ಗೆ ನಾವು ಎಲ್ಲಾ ಯೋಚಿಸಬೇಕಲ್ಲವೆ? ಬಿಎಸಿ ಯಲ್ಲಿ ತೀರ್ಮಾನವಾದಂತೆ ಎರಡು ಬಿಲ್ ಪಾಸ್ ಆಗಿದೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ತಾವೇ ಮಾನ್ಯ ಕೃಷ್ಣಪ್ಪನವರ ಬಿಲ್ ಆದ ನಂತರ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ ಅಲ್ಲವೆ?

ಉಪಾಧ್ಯಕ್ಷರು:- ಹೊಸ ಬಿಲ್ ತೆಗೆದುಕೊಳ್ಳಲಿಲ್ಲ ಇದು ಚರ್ಚೆಯಾದ ವಿಷಯ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸರ್ಕಾರ ಇಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತದೆ ಎಂದರೆ ಇದನ್ನು ತೆಗೆದುಕೊಳ್ಳಬಾರದು ಎಂದು ಹೇಳಿಬಿಡಿ, ಇದನ್ನು ನಾವು ತೆಗೆದುಕೊಳ್ಳುವುದಿಲ್ಲ ಇನ್ನೊಂದು ಬಿಲ್ ತೆಗೆದುಕೊಳ್ಳುತ್ತೇವೆಂದು ಹೇಳಿಬಿಡಿ.

ಶ್ರೀ ಜಗದೀಶ್ ಶೆಟ್ಟರ್:- ಗಮನ ಸೆಳೆಯುವ ಸೂಚನೆಯಾದ ಮೇಲೆ ಇದನ್ನು ತೆಗೆದುಕೊಳ್ಳಬಹುದಲ್ಲವೆ?

ಉಪಾಧ್ಯಕ್ಷರು:- ನೀವು ಮಾತನಾಡುವಷ್ಟರಲ್ಲಿಯೇ ಇದು ಮುಗಿದು ಹೋಗುತ್ತಿತ್ತು.

ಶ್ರೀ ಜಗದೀಶ್ ಶೆಟ್ಟರ್:- ಅಷ್ಟರಲ್ಲಿಯೇ ಈ ಗಮನ ಸೆಳೆಯುವ ಸೂಚನೆಯೂ ಮುಗಿತ್ತಿತ್ತು. ಏಕೆ ಇದನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಳ್ಳುತ್ತೀರಿ?

ಉಪಾಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಸ್ವಲ್ಪ ಸಹಕರಿಸಬೇಕು, ನಾನು ಈಗಾಗಲೇ ಅವರನ್ನು ಕರೆದಿದ್ದೇನೆ, ದಯವಿಟ್ಟು ಸಹಕರಿಸಿ.

ಶ್ರೀ ಜಗದೀಶ್ ಶೆಟ್ಟರ್:- ಬಿಎಸಿ ಯಲ್ಲಿ ಎರಡು ಬಿಲ್ ಎಂದು ಹೇಳಿ ಈಗ ಇದನ್ನು ಫೋರ್ಸಿಬಿಲಿ ತೆಗೆದುಕೊಳ್ಳುತ್ತಿದ್ದೀರಿ. ಅಮೆಂಡ್‌ಮೆಂಟ್ ಅವರು ಏನು ತಂದಿದ್ದಾರೆ ಅದನ್ನು ನೋಡುವುದು ಬೇಡವೆ? ಅಮೆಂಡ್‌ಮೆಂಟ್ ನೋಡಲಾರದೆ, ಚರ್ಚೆ ಮಾಡದೇ ಹಾಗೆಯೇ ಪಾಸ್ ಮಾಡೋಣವೆ?.. ನನಗೆ ಅರ್ಥವೇ ಆಗುತ್ತಿಲ್ಲ..

ಉಪಾಧ್ಯಕ್ಷರು:- ಆಯಿತು ಇದು ಒಂದು ಸಣ್ಣ ತಿದ್ದುಪಡಿ ಇದೆ ಅಷ್ಟೆ.

ಶ್ರೀ ವಿಶ್ವೇಶ್ವರ ಹೆಗಡೆ:- ಮಾನ್ಯ ಉಪಾಧ್ಯಕ್ಷರೆ, ತಾವು ಏಕೆ ಈ ರೀತಿ ಹಠ ಹಿಡಿಯುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು:- ನಾನು ಅವರನ್ನು ಕರೆದಿದ್ದೇನೆ 5 ನಿಮಿಷದಲ್ಲಿ ಇದನ್ನು ಮುಗಿಸೋಣ ಮಾಡೋಣ ಸ್ವಲ್ಪ ತಾಳಿ.. ಮಾಡದಿದ್ದರೆ ಆ ಮಾತು ಬೇರೆ..

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಮಗೆ ಆ ಸ್ಥಾನದ ಬಗ್ಗೆ ವಿಶ್ವಾಸ ಇದೆ, ಮಾಡೋಣ ಎಂದು ಹೇಳಿಕೊಂಡೇ ಇಲ್ಲಿಯವರೆಗೆ ಬಂದಿದ್ದೀರಿ. ನಮ್ಮ ಗೋಳನ್ನು ಕೇಳಿ.

ಉಪಾಧ್ಯಕ್ಷರು:- ಖಂಡಿತವಾಗಿ ಮಾಡಿಕೊಡೋಣ, ದಯಮಾಡಿ ತಾವು ಕುಳಿತುಕೊಳ್ಳಿ, ತಾವು ಮಂತ್ರಿಗಳು ಹೇಳಿ..